ಎಂದು ಖಿನ್ನತೆಗೆ ಬಿದ್ದುಬಿಟ್ಟಿದ್ದ. ''ಲೋ ಅಲ್ಲಮ, ಜಮೀನನ್ನು ಯಾರಿಗಾದರೂ ಮಾರಿ ಆ ಕಡೆ ಬೆಂಗಳೂರಿಗೋ, ಮುಂಬಯಿಗೋ ಹೋಗಿ ಹಾಯಾಗಿ ಇದ್ದುಬಿಡು. ಮನುಷ್ಯ ಸುಖ ಪಡದೇ ಇದ್ದರೆ ಈ ಭೂಮಿಯ ಮೇಲೆ ಹುಟ್ಟಿ ತಾನೇ ಏನು ಪ್ರಯೋಜನ ಹೇಳು. ನಮ್ಮ ವಂಶಕ್ಕೆ ಏನೋ ಘನತರವಾದ ಶಾಪವಿರಬೇಕೆಂದು ಎಲ್ಲರೂ ಹೇಳುತ್ತಾರೆ. ಹುಟ್ಟಿದ ಜಾಗವನ್ನು ಬಿಟ್ಟರೆ ಶಾಪ ವಿಮೋಚನೆಯಾದರೂ ಆಗಬಹುದು...'' ಎಂದು ವಾರಕ್ಕೊಮ್ಮೆಯಾದರೂ ಹೇಳುತ್ತಿದ್ದ. ಎರಡು ಎಕರೆ ಅಡಿಕೆ ತೋಟ, ಎಂಟು ಎಕರೆ ಅನಾನಸ್ ಬೆಳೆಯುತ್ತಿದ್ದ ಒಂದೇ ಬೌಂಡರಿಯಿದ್ದ ಜಮೀನು. ಆದಾಯಕ್ಕೇನೂ ಕಡಿಮೆ ಇರಲಿಲ್ಲ. ಅಲ್ಲಮಪ್ರಭುವಿಗೆ ಒಂದೊಂದೇ ವರ್ಷ ವಯಸ್ಸು ಜಾಸ್ತಿಯಾಗುತ್ತಿದ್ದಂತೆ ಅವನಪ್ಪ ಚಿಂತೆಯಿಂದ ಮನೋವ್ಯಾಧಿಯನ್ನು ಗಾಳಿ, ನೀರುಗಳನ್ನೂ ತನ್ನೆದೆಗೆ ಸುರಿದುಕೊಳ್ಳುತ್ತಿದ್ದ. ಮೂರು ತಿಂಗಳ ಹಿಂದೆ ಒಂದು ದಿನ ಬೆಳಗ್ಗೆ ಅಲ್ಲಮಪ್ರಭು ಅಪ್ಪನಿಗೆ ಕಷಾಯ ಕೊಡಲು ಕೋಣೆಗೆ ಹೋದಾಗ ಅಪ್ಪನ ಉಸಿರು ನಿಂತು ಹೋಗಿತ್ತು.

ಅಪ್ಪನಿಗೆ ಹೃದಯಾಘಾತವಾಗಿತ್ತು. ದುಃಖ, ಸಂತೋಷ ಒಟ್ಟಿಗೆ ಆವರಿಸಿಕೊಂಡಂತೆ ವಿಚಿತ್ರ ಅನುಭವವಾಗಿತ್ತು ಅಲ್ಲಮಪ್ರಭುವಿಗೆ. ಅಂದು ಅಪ್ಪನ ಹೆಣ ಸಂಸ್ಕಾರ ಮುಗಿಸಿ ತಿಥಿಯ ಕುರಿತು ಒಂದಿಬ್ಬರು ಬಂಧುಗಳೊಂದಿಗೆ ಸಂಜೆ ಮಾತನಾಡುತ್ತಿರುವಾಗ ಹೊನ್ನಾವರದ ಮೋಹನ್ ಕಿಣಿ ಯಾರೊಂದಿಗೋ ಕಾರಲ್ಲಿ ಬಂದು ಮನೆಯ ಬಾಗಿಲಿಗೇ ಇಳಿದಿದ್ದ. ಅಲ್ಲಮಪ್ರಭುವಿಗಿಂತಲೂ ಐದಾರು ವರ್ಷ ದೊಡ್ಡವನಿರಬೇಕು ಮೋಹನ್ ಕಿಣಿ. ಬನವಾಸಿ, ಶಿರಸಿ, ಸಿದ್ದಾಪುರ, ಹೊನ್ನಾವರಗಳಲ್ಲಿ ಜಮೀನು ಮಾರುವವರಿಗೆ, ಕೊಳ್ಳುವವರಿಗೆ ಥಟ್ಟನೆ ವ್ಯಾಪಾರ ಕುದುರಿಸಿಕೊಡುವುದರಲ್ಲಿ ನಿಪುಣನೆನಿಸಿದ್ದಾನೆ. ಮತ್ತೆ ವ್ಯವಹಾರದಲ್ಲಿ ಯಾರಿಗೂ ದೋಖಾ ಮಾಡದೆ ಒಳ್ಳೆಯ ಹೆಸರು ಗಳಿಸಿದ್ದಾನೆ. ಜೊತೆಗೆ ಅನಾನಸ್ ಬೆಳೆಯುವ ರೈತರಿಗೆ ಕೈ ತುಂಬಾ ರೇಟು ಕೊಡಿಸುತ್ತಾನೆ. ''ಅರೆ, ಮಾರಾಯ ಎಂಥ ಒಳ್ಳೆಯ ಸಾವು ಬಂತು ಅಪ್ಪನಿಗೆ. ಹೋಗ್ಲಿ ಬಿಡು ಕರ್ಮ ಹರೀತು. ಈಗ ಬಂದ ವಿಷಯ ಏನಂದ್ರೆ...'' ಎಂದು ಮಾತು ಪ್ರಾರಂಭಿಸುತ್ತಿದ್ದಂತೆ ಅವರನ್ನು ಹಿತ್ತಲ ತೋಟಕ್ಕೆ ಕರೆದುಕೊಂಡು ಹೋಗಿದ್ದ ಅಲ್ಲಮಪ್ರಭು. ''ನೋಡು ಅಲ್ಲಮ, ಇವರು ಮುಂಬಯಿಯಿಂದ ಬಂದಿದ್ದಾರೆ. ಪೈನಾಪಲ್ ಜ್ಯೂಸ್ ಫ್ಯಾಕ್ಟರಿ ಸ್ಟಾರ್ಟ್ ಮಾಡಲು ಭೂಮಿಯನ್ನು ಹುಡುಕ್ತಾ ಇದಾರೆ. ನಿಮ್ಮ ಎಂಟು ಎಕರೆ ಜಮೀನು ಇವರ ಪ್ರಾಜೆಕ್ಟ್‌ಗೆ ಬರೋಬ್ಬರಿ ಸರಿಹೊಂದಲಿಕ್ಕುಂಟು. ಮೂರು ಎಕರೆಗಿಂತಲೂ ಹೆಚ್ಚು ಭೂಮಿ ಯಾರಿಗಿದೆ ಹೇಳು ಈ ಆಸುಪಾಸಿನಲ್ಲಿ ನಿಮ್ಮನ್ನು ಬಿಟ್ಟರೆ. ನೀನೊಂದು ರೇಟು ಹೇಳಿದ್ರೆ ನಾಳೆಯೇ ಫುಲ್ ಅಮೌಂಟ್ ಕೊಡ್ತಾರೆ.'' ಎಂದಿದ್ದ ಕಿಣಿ. ಭೂಮಿ ಕೊಳ್ಳಲು ಬಂದವ ಆಸೆಗಣ್ಣುಗಳಿಂದ ಅಲ್ಲಮಪ್ರಭುವಿನ ಕಡೆಯೇ ನೋಡುತ್ತಿದ್ದ. ''ಅಪ್ಪ ಸತ್ತು ದಿನ ಕೂಡಾ ಪೂರ್ತಿಯಾಗಲಿಲ್ಲ...'' ಅಲ್ಲಮಪ್ರಭು ರಾಗ ತೆಗೆದಿದ್ದ. ''ಸಾವಿಗೂ, ವ್ಯಾಪಾರಕ್ಕೂ ಎಂಥ ಸಂಬಂಧವುಂಟು ಹೇಳು ಮಾರಾಯ ಮತ್ತೆ. ನಿಮ್ಮಪ್ಪ ಬನವಾಸಿ ಭಟ್ಟರ ಹೋಟೆಲಿನಲ್ಲಿ ಸಿಕ್ಕಾಗಲೆಲ್ಲ ಭೂಮಿ ಮಾರಲು ಒಳ್ಳೆ ಗಿರಾಕಿ ನೋಡು ಅಂತಾನೇ ಇದ್ದ.'' ಮೋಹನ್ ಕಿಣಿ ಸತ್ಯವೇ ಮಾತನಾಡುತ್ತಿದ್ದ. ''ತಿಥಿ ಮುಗಿದ ಅನಂತರ ಮಾತನಾಡುವ.'' ಎಂದಿದ್ದ ಅಲ್ಲಮಪ್ರಭು. ''ತಿಥಿ ಆದ ಅನಂತರವೇ ರಿಜಿಸ್ಟ್ರೇಶನ್ ಇಟ್ಕೊಳ್ಳೋಣ. ಮತ್ತೆ ವಂಶ ಪಾರಂಪರ್ಯ ಅನ್ನೊದಾದ್ರೆ ಎರಡೆಕರೆ ಅಡಿಕೆ ತೋಟ ಇದೆಯಲ್ಲ. ನಿನ್ನ ಪ್ರಾಣಪಕ್ಷಿ ಹಾರಿ ಹೋಗೋತನ್ಕ ನೀನೇ ಇಟ್ಕ. ಲೇಬರ್ ಪ್ರಾಬ್ಲಂನಿಂದಾಗಿ ಅರ್ಧ ಎಕರೆ ತೋಟ ಇರೋರ ಗೋಳೇ ನೋಡ್ಲಿಕ್ಕಾಗ್ತಿಲ್ಲ. ಇನ್ನು ಈ ಕಾಲದ ಹೆಣ್ಣುಮಕ್ಕು ಕೃಷಿ ನೆಚ್ಚಿಕೊಂಡವರನ್ನ ಮೆಚ್ಚಿ ಮದ್ವೆ ಆಗ್ಲಿಕ್ಕೂ ಮುಂದ್ ಬರೋದಿಲ್ಲ. ಭೂಮಿ ಮಾರಿ ಶಿರಸಿಲೀ ಒಂದೊಳ್ಳೆ ಮನೆ ತಗಂಡು ಎಂಥದ್ದಾದ್ರು ಬಿಸಿನೆಸ್ ಶುರು ಮಾಡು, ನಿನ್ನ ಲೈಫ್ ಸೆಟ್ಲಾಗದಿದ್ರೆ ನನ್ನ ಕಿಣಿ ಅಂತ ಹೆಸರಿಡ್ದು ಕರಿಬೇಡ ಮತ್ತೆ...''